# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 510 |
| **ಸದಸ್ಯರ ಹೆಸರು** | : | ಶ್ರೀಮತಿ ಭಾರತಿ ಶೆಟ್ಟಿ (ನಾಮ ನಿರ್ದೇಶನ ಹೊಂದಿದವರು) |
| **ಉತ್ತರಿಸಬೇಕಾದ ದಿನಾಂಕ** | : | 11-12-2025 |
| **ಉತ್ತರಿಸಬೇಕಾದ ಸಚಿವರು** | : | ಉಪ ಮುಖ್ಯಮಂತ್ರಿಯವರು |

****

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| **ಅ)** | ಬೆಂಗಳೂರಿನಲ್ಲಿ ಪ್ರತಿನಿತ್ಯ ಸರಬರಾಜಾಗುತ್ತಿರುವ ಕುಡಿಯುವ ನೀರಿನ ಪ್ರಮಾಣವೇನು; ಇದನ್ನು ಯಾವ ಮೂಲಗಳಿಂದ ಯಾವ ಪ್ರಮಾಣದಲ್ಲಿ ಪಡೆಯಲಾಗುತ್ತಿದೆ; (ವಿವರ ಒದಗಿಸುವುದು) | ಪ್ರಸ್ತುತ, ಕಾವೇರಿ ನದಿಯ ಮೂಲದಿಂದ ಬೆಂಗಳೂರು ನಗರಕ್ಕೆ ದಿನಂಪ್ರತಿ 1850 ಎಂ.ಎಲ್.ಡಿ ಕುಡಿಯುವ ನೀರು ಸರಬರಾಜಾಗುತ್ತಿದೆ. ವಿವರ ಈ ಕೆಳಕಂಡಂತಿದೆ. (ಕೆಳಗಿನ ಕೋಷ್ಟಕ) |
| **ಆ)** | ನಗರದ ವಿವಿಧ ಬಡಾವಣೆಗಳಲ್ಲಿ ಎಷ್ಟು ದಿನಗಳಿಗೊಮ್ಮೆ ಕುಡಿಯುವ ನೀರನ್ನು ಬಿಡಲಾಗುತ್ತಿದೆ; (ಬಡಾವಣೆವಾರು ಮತ್ತು ವಾರ್ಡ್ ವಾರು ವಿವರ ಒದಗಿಸುವುದು) | ಬೆಂಗಳೂರು ನಗರದ ಕೋರ್ ಪ್ರದೇಶ ಹಾಗೂ ಈ ಹಿಂದಿನ ಬಿ.ಬಿ.ಎಂ.ಪಿ.ಗೆ (ಹಾಲಿ ಜಿ.ಬಿ.ಎ) ಸೇರ್ಪಡೆಯಾದ 7 ನಗರಸಭೆ ಮತ್ತು 1 ಪುರಸಭೆ ಪ್ರದೇಶಗಳಲ್ಲಿನ ಬಡಾವಣೆಗಳಿಗೆ ಪರ್ಯಾಯ ದಿನಗಳಲ್ಲಿ ಕಾವೇರಿ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಹಿಂದಿನ 110 ಹಳ್ಳಿ ಪ್ರದೇಶಗಳಿಗೆ ನೀರಿನ ಲಭ್ಯತೆ ಅನುಸಾರ ವಾರಕ್ಕೆ 2 ಬಾರಿ ಕಾವೇರಿ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ. |
| **ಇ)** | ಕೆಂಗೇರಿ ಉಪನಗರದ ಮುನಿಕೃಷ್ಣ ಬಡಾವಣೆಯಲ್ಲಿ (ಬಲಮುರಿ ಗಣೇಶ ದೇವಸ್ಥಾನದ ಬಳಿ ಇರುವ) ಎಷ್ಟು ದಿನಗಳಿಗೊಮ್ಮೆ ನೀರು ಬಿಡಲಾಗುತ್ತಿದೆ. | ಕೆಂಗೇರಿ ಉಪನಗರದ ಮುನಿಕೃಷ್ಣ ಬಡಾವಣೆಗೆ (ಬಲಮುರಿ ಗಣೇಶ ದೇವಸ್ಥಾನದ ಬಳಿ ಇರುವ) ಬೆಂಗಳೂರು ಜಲಮಂಡಳಿ ವತಿಯಿಂದ 4 ದಿನಗಳಿಗೊಮ್ಮೆ ಕಾವೇರಿ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. |
| **ಈ)** | 5 ದಿನಗಳಿಗೊಮ್ಮೆ ನೀರು ಬಿಡುತ್ತಿರುವುದಕ್ಕೆ ಕಾರಣಗಳೇನು? | ಉದ್ಭವಿಸುವುದಿಲ್ಲ. |

(ಅ) ಉತ್ತರದ ಕೋಷ್ಟಕ:

| ಕ್ರ.ಸಂ | ಕಾವೇರಿ ಹಂತ | ಪ್ರಮಾಣ |
|---|---|---|
| 01 | ಕಾವೇರಿ 1ನೇ ಹಂತ | 135 ಎಂ.ಎಲ್.ಡಿ |
| 02 | ಕಾವೇರಿ 2ನೇ ಹಂತ | 135 ಎಂ.ಎಲ್.ಡಿ |
| 03 | ಕಾವೇರಿ 3ನೇ ಹಂತ | 330 ಎಂ.ಎಲ್.ಡಿ |
| 04 | ಕಾವೇರಿ 4ನೇ ಹಂತ 1ನೇ ಘಟ್ಟ | 300 ಎಂ.ಎಲ್.ಡಿ |
| 05 | ಕಾವೇರಿ 4ನೇ ಹಂತ 2ನೇ ಘಟ್ಟ | 550 ಎಂ.ಎಲ್.ಡಿ |
| 06 | ಕಾವೇರಿ 5ನೇ ಹಂತ | 400 ಎಂ.ಎಲ್.ಡಿ |
| | **ಒಟ್ಟು** | **1850 ಎಂ.ಎಲ್.ಡಿ** |

**ಸಂಖ್ಯೆ:** ನಅಇ 401 ಎಂಎನ್ಐ 2025(ಇ)

**(ಡಿ.ಕೆ. ಶಿವಕುಮಾರ್)**
**ಉಪ ಮುಖ್ಯಮಂತ್ರಿ**